
ಎಳೆಯರ ಅಂಗಳ

# ಐಸ್‌ಕ್ರೀಮ್

■ ನಾಗೇಂದ್ರ ಚಕ್ರಗಿರಿ
ಕಲೆ: ಸಂತೋಷ್ ಸಸಿಹಿತ್ಲು



ರಾಜು ಒಬ್ಬ ಬಡ ಹುಡುಗ. ಅವನ ತಾಯಿ ಕೂಲಿ ನಾಲಿ ಮಾಡಿ ಅವನನ್ನು ಸಾಕುತ್ತಿದ್ದಳು. ಅವನನ್ನು ಶಾಲೆಗೂ ಕಳುಹಿಸುತ್ತಿದ್ದಳು

ಒಮ್ಮೆ ಅವನು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಇಬ್ಬರು ಹುಡುಗರು ಐಸ್ ಕ್ರೀಮ್ ಅಂಗಡಿ ಒಂದರಿಂದ ಐಸ್‌ಕ್ರೀಮ್ ತೆಗೆದುಕೊಂಡು, ಅದರ ರುಚಿಯನ್ನು ಹೊಗಳುತ್ತಾ, ತಿನ್ನುತ್ತಾ ಇವನ ಪಕ್ಕದಲ್ಲಿಯೇ ಹೋದರು. ಅವರ ಐಸ್ ಕ್ರೀಮ್ ರುಚಿಯ ವರ್ಣನೆ ಕೇಳಿ ರಾಜುವಿನ ಬಾಯಿಯಲ್ಲಿ ನೀರೂರಿತು. ಅವನು ಎಂದೂ ಐಸ್ ಕ್ರೀಮ್ ತಿಂದಿರಲಿಲ್ಲ. ಐಸ್‌ಕ್ರೀಮ್ ತಿನ್ನಬೇಕೆಂಬ ಆಸೆ ಅವನಲ್ಲಿ ಹೆಚ್ಚಾಗತೊಡಗಿತು. ಹೇಗಾದರೂ ಹಣ ಸಂಪಾದಿಸಿ ಐಸ್‌ಕ್ರೀಮ್ ತಿನ್ನಲೇಬೇಕು ಎಂದು ನಿರ್ಧರಿಸಿ ಶಾಲೆಗೆ ಚಕ್ಕರ್ ಹಾಕಿ ಕೆಲಸ ಮಾಡಿ ಹಣ ಸಂಪಾದಿಸಲು ನಿರ್ಧರಿಸಿದ. ಮಾರುಕಟ್ಟೆಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದವರಿಗೆ ಮತ್ತು ಅಲ್ಲಿನ ವರ್ತಕರಿಗೆ ಸಣ್ಣ ಪುಟ್ಟ ಸಹಾಯ ಮಾಡಿ ಹತ್ತು ರೂಪಾಯಿ ಸಂಪಾದಿಸಿ ಲಗು ಬಗೆಯಿಂದ ಐಸ್‌ಕ್ರೀಮ್ ಅಂಗಡಿಗೆ ಬಂದು, ಅಂಗಡಿಯವನಿಗೆ ಹತ್ತು ರೂಪಾಯಿ ಕೊಟ್ಟು ಐಸ್‌ಕ್ರೀಮ್ ಕೊಡಿ ಎಂದ. ಅಂಗಡಿಯವ 'ಲೋ ಹುಡುಗ, ಐಸ್ ಕ್ರೀಮ್‌ಗೆ ಕಮ್ಮಿ ಅಂದರೂ 50 ರೂಪಾಯಿ ಆಗುತ್ತದೆ. ಹತ್ತು ರೂಪಾಯಿಗೆ ಐಸ್‌ಕ್ರೀಮ್ ಬರುವುದಿಲ್ಲ. ನಡಿ, ನಡಿ' ಎಂದು ಕಳುಹಿಸಿಬಿಟ್ಟ. ಭಾರವಾದ ಮನಸ್ಸಿನಿಂದ ರಾಜು ಮನೆಗೆ ಬಂದ. ಅವನ ಐಸ್ ಕ್ರೀಮ್ ತಿನ್ನುವ ಆಸೆ ಮಾತ್ರ ಸ್ವಲ್ಪವೂ ಕಮ್ಮಿಯಾಗಲಿಲ್ಲ.

ಶಾಲೆಯ ಚಕ್ಕರ್ ಮುಂದುವರಿಸಿ 3–4 ದಿನ ಕೆಲಸ ಮಾಡಿ ಅಂತೂ ಐವತ್ತು ರೂಪಾಯಿ ಸಂಪಾದಿಸಿ ಮಾರನೆಯ ದಿನ ಐಸ್ ಕ್ರೀಮ್ ಅಂಗಡಿಗೆ ಹೋಗಲು ನಿರ್ಧರಿಸಿ ಮನೆಗೆ ಬಂದ. ಆಗಲೇ ಕೆಲಸ ಮುಗಿಸಿ ಮನೆಗೆ ಬಂದಿದ್ದ ಅವನ ಅಮ್ಮ ಚಾಪೆಯ ಮೇಲೆ ಮುಲುಗುತ್ತಾ ಮಲಗಿದ್ದಳು. ಅವಳಿಗೆ ಜ್ವರ ಬಂದಿತ್ತು. ರಾಜು ಕೂಡಲೇ ತಾಯಿಯನ್ನು ಮನೆಯ ಹತ್ತಿರದ ಕ್ಲಿನಿಕ್ಕಿಗೆ ಕರೆದೊಯ್ದ. ಡಾಕ್ಟರ್ ಅವಳನ್ನು ಪರೀಕ್ಷಿಸಿ ಮಾತ್ರೆ ಕೊಟ್ಟು ಕಳುಹಿಸಿದರು. ತಾನು ಸಂಪಾದಿಸಿದ 50 ರೂಪಾಯಿ ಖರ್ಚಾಗಿ ಹೋಯಿತು. ಹಣ ಎಲ್ಲಿಂದ ಬಂತು ಎಂದು ತಾಯಿ ಕೇಳಿದ್ದಕ್ಕೆ 'ಶಾಲೆಗೆ ರಜಾ ಇದೆ. ಹಾಗಾಗಿ ತಾನು ಅಲ್ಲಿ ಇಲ್ಲಿ ಕೆಲಸ ಮಾಡಿ ಸ್ವಲ್ಪ ಹಣ ಸಂಪಾದಿಸಿದೆ' ಎಂದು ಅರ್ಧ ಸತ್ಯ ಅರ್ಧ ಸುಳ್ಳು ಹೇಳಿದ.

ಅಮ್ಮ ಪೂರ್ತಿ ಚೇತರಿಸಿಕೊಳ್ಳುವವರೆಗೂ ರಾಜು ಶಾಲೆಗೆ ಹೋಗಲಿಲ್ಲ. ತಾನೇ ಕೆಲಸ ಮಾಡಿ ನಾಲ್ಕೈದು ದಿನ ಮನೆ ಖರ್ಚಿಗೆ ದಾರಿ ಮಾಡಿ, ಅಮ್ಮ ಎಂದಿನಂತೆ ಚೇತರಿಸಿಕೊಂಡು ಕೆಲಸಕ್ಕೆ ಹೊರಟ ಮೇಲೆ, ಐಸ್‌ಕ್ರೀಮಿಗಾಗಿ ಕೆಲಸ ಮಾಡಿ ಮತ್ತೆ 50 ರೂಪಾಯಿ ಸಂಪಾದಿಸಿ ಮನೆಗೆ ಬರುತ್ತಿದ್ದಾಗ ಪಕ್ಕದ ಮನೆಯ ಹುಡುಗಿ ಅವಳ ಮನೆಯ ಮುಂದೆ ಕುಳಿತು ಅಳುತ್ತಿದ್ದಳು. 'ಏಕೆ ಅಳುತ್ತಿದ್ದೀಯ ಪುಟ್ಟಿ?' ಅಂತ ವಿಚಾರಿಸಿದ. ಅವಳು 'ರಾಜು ಅಣ್ಣ, ಪರೀಕ್ಷೆ ಹತ್ತಿರ ಬರುತ್ತಿದೆ. ನನಗೆ ಅಗತ್ಯವಿರುವ ಪುಸ್ತಕ ಕೊಳ್ಳಲು ಹಣ ಇಲ್ಲ. ಆ ಪುಸ್ತಕ ಇಲ್ಲದಿದ್ದರೆ ನಾನು ಪರೀಕ್ಷೆಯಲ್ಲಿ ಪಾಸಾಗಲು ಸಾಧ್ಯವೇ ಇಲ್ಲ. ಅದಕ್ಕೇ ತುಂಬಾ ಬೇಸರವಾಗಿದೆ' ಎಂದಳು. ಅದಕ್ಕೆ ರಾಜು 'ಅಳಬೇಡ ಪುಟ್ಟಿ, ಪುಸ್ತಕಕ್ಕೆ ಎಷ್ಟು ಹಣ ಬೇಕು?' ಎಂದ. 'ಒಂದು ನೂರು ರೂಪಾಯಿ ಆಗುತ್ತಣ್ಣ' ಎಂದಳು ಪುಟ್ಟಿ. ಸ್ವಲ್ಪ ಯೋಚಿಸಿ ರಾಜು 'ಚಿಂತಿಸಬೇಡ ಪುಟ್ಟಿ, ಎರಡು ಮೂರು ದಿನದಲ್ಲಿ ನಿನಗೆ ನಾನು ಹಣ ಕೊಡುತ್ತೇನೆ. ನೀನು ತುಂಬಾ ಜಾಣೆ. ಖಂಡಿತಾ ಒಳ್ಳೆಯ ಅಂಕಗಳನ್ನು ತೆಗೆದು ಪಾಸಾಗುವೆ' ಎಂದು ಹೇಳಿ ಅವಳಿಗೆ ಧೈರ್ಯ ತುಂಬಿದ.

ರಾಜು ತನ್ನ ಕಾಯಕ ಮುಂದುವರೆಸಿ ಮತ್ತಷ್ಟು ಹಣ ಸೇರಿಸಿ ಪುಟ್ಟಿಗೆ ಪುಸ್ತಕ ಕೊಡಿಸಿದ. ಪುಟ್ಟಿಗೆ ದೊಡ್ಡ ನಿಧಿಯೇ ಸಿಕ್ಕಷ್ಟು ಸಂತೋಷವಾಯಿತು. ರಾಜುವಿಗೆ ಎಷ್ಟು ಕೃತಜ್ಞತೆ ಹೇಳಿದರೂ ಅವಳಿಗೆ ತೃಪ್ತಿಯೇ ಇಲ್ಲ.

ಅಂದು ರಾತ್ರಿ ಚಾಪೆಯ ಮೇಲೆ ಮಲಗಿದ ರಾಜು ತಾನು ಐಸ್‌ಕ್ರೀಮ್ ತಿನ್ನಬೇಕೆಂದುಕೊಂಡ ದಿನದಿಂದ ಇಲ್ಲಿಯವರೆಗಿನ ವಿಷಯಗಳ ಬಗ್ಗೆ ಯೋಚಿಸ ತೊಡಗಿದ. ಮೊದಲು ದುಡಿದ ಹತ್ತು ರೂಪಾಯಿ ಐಸ್‌ಕ್ರೀಮ್‌ಗೆ ಸಾಕಾಗಲಿಲ್ಲ. ಆಮೇಲೆ ದುಡಿದ ಹಣದಿಂದ ತಾಯಿಯ ಚಿಕಿತ್ಸೆಯಾಯಿತು, ಪುಟ್ಟಿಗೆ ಪುಸ್ತಕ ಸಿಕ್ಕಿತು. ಇವೆರಡೂ ಐಸ್‌ಕ್ರೀಮ್‌ಗಿಂತ ಖಂಡಿತವಾಗಿಯೂ ರುಚಿಯಾಗಿತ್ತು. ಇವುಗಳಿಂದ ಸಿಕ್ಕ ತೃಪ್ತಿ ಬಹುಶಃ ತನಗೆ ಐಸ್‌ಕ್ರೀಮ್ ತಿಂದಿದ್ದರೆ ಸಿಗುತ್ತಿರಲಿಲ್ಲ ಎನಿಸಿ ಮನಸ್ಸು ಹಗುರವಾಯಿತು.

ನಡೆದದ್ದೆಲ್ಲ ತಾಯಿಗೆ ವಿವರಿಸಿದ. ತಾಯಿಗೆ ಮಗನ ಕಾರ್ಯದಿಂದ ಹೆಮ್ಮೆ ಎನಿಸಿತು. ಅವಳು 'ಮಗ, ನೀನು ಮಾಡಿದ್ದು ನಿಜವಾಗಲೂ ಒಳ್ಳೆಯ ಕೆಲಸವೇ. ಆದರೂ, ನಾಳೆಯಿಂದ ಕೆಲಸ ಮಾಡುವುದು ನಿಲ್ಲಿಸಿ, ಶಾಲೆಗೆ ಹೋಗಿ, ಓದಿ ಬುದ್ಧಿವಂತನಾಗು. ನೀನು ಐಸ್ ಕ್ರೀಮ್ ತಿನ್ನುವ ದಿನ ಬಂದೇ ಬರುತ್ತದೆ' ಎಂದಳು. ರಾಜು ನೆಮ್ಮದಿಯಿಂದ ನಿದ್ದೆ ಮಾಡಿದ. ■